ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 07-02-2015

## ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2014-15 ನೇ ಸಾಲಿನ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿ ರಾಜ್ಯ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗೆ/ಪೋಷಕರಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕ್ರೀಡಾಪಟುಗಳು ನಿರಂತರವಾಗಿ ಕ್ರೀಡಾಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕಾಗಿ ಅವರ ಕುಟುಂಬಕ್ಕೆ ಆರ್ಥಿಕ ಭದ್ರತೆ ನೀಡುವುದಕ್ಕಾಗಿ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ರೂ 25,000/- ರಾಜ್ಯ ಮಟ್ಟದಲ್ಲಿ ರೂ 50,000/- ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ರೂ 1,00,000/- ಪ್ರೋತ್ಸಾಹ ಧನ ನೀಡಲಾಗುವುದು.

ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಅರ್ಹ ಕ್ರೀಡಾಪಟುಗಳು ತಾವು ಮಾಡಿರುವ ಸಾಧನೆಗಳ ಪ್ರಮಾ ಪತ್ರದೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಗೆ ದಿನಾಂಕ 13-02-2015 ರ ಒಳಗಾಗಿ ಸಲ್ಲಿಸುವುದು.

ಬಾಬು:ಜಿಪಿಆರ್.

## ಫಲಿತಾಂಶ ಪ್ರಕಟ

**ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ 2014 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಫಲಿತಾಂಶವನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ನೋಡಬಹುದಾಗಿದೆ. ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಅಂಕಗಳ ಮರು-ಎಣಿಕೆಗಾಗಿ ಫಲಿತಾಂಶ ಪ್ರಕಟವಾದ 30 ದಿನಗಳೊಳಗಾಗಿ ನಿಗದಿತ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ ಹಾಗೂ ಆಯೋಗವು ನಡೆಸುವ 2015 ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಅಧಿಸೂಚನೆಯಲ್ಲಿ ಅರ್ಹ ಸರ್ಕಾರಿ ನೌಕರರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ದಿನಾಂಕ 07–03–2015 ರೊಳಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದ್ದು, ಶುಲ್ಕವನ್ನು ಸ್ಕ್ಯಾನರ್ ಸೌಲಭ್ಯವಿರುವ ರಾಜ್ಯದ ಯಾವುದೇ ಗಣಕೀಕೃತ ಅಂಚೆ ಕಚೇರಿ ಶಾಖೆಗಳಲ್ಲಿ ದಿನಾಂಕ: 09–03–2015 ರವರೆಗೆ ಪಾವತಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ಪ್ರಕಟಿಸಿರುವ ಅಧಿಸೂಚನೆಯನ್ನು ನೋಡಬಹುದಾಗಿದ್ದು, ಮಾಹಿತಿಗಾಗಿ ದೂರವಾಣಿ ಸಂಖ್ಯೆ 080 –30574944/30574945/30574957 ಅನ್ನು ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

## ಕನ್ನಡ ಚಿತ್ರರಂಗ ಮತ್ತು ಕಾದಂಬರಿ : ವಿಚಾರ ಸಂಕಿರಣ

ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಕಂಠೀರವ ಸ್ಟುಡಿಯೋಸ್ ಮತ್ತು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಫೆಬ್ರವರಿ 11 ರಂದು ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ "ಕನ್ನಡ ಚಿತ್ರರಂಗ ಮತ್ತು ಕಾದಂಬರಿ" ಕುರಿತ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ.

ಫೆಬ್ರವರಿ 11 ರಂದು ಬೆಳಗ್ಗೆ 10–30 ಗಂಟೆಗೆ ವಿಚಾರ ಸಂಕಿರಣವನ್ನು ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸ್ ಪ್ರಸಾದ್, ಲೋಕೋಪಯೋಗಿ ಸಚಿವ ಶ್ರೀ ಹೆಚ್. ಸಿ. ಮಹಾದೇವಪ್ಪ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಹಜ್ ಮತ್ತು ವಾರ್ತಾ ಸಚಿವ ಶ್ರೀ ರೋಷನ್ ಬೇಗ್ ಅವರು ಉದ್ಘಾಟಿಸುವರು. ಶಾಸಕ ಶ್ರೀ ವಾಸು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಿಧಾನಸಭಾ ಸದಸ್ಯರಾದ ಡಾ. ಜಯಮಾಲಾ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಶ್ರೀ ಎಂ.ಎ. ಪೊನ್ನಪ್ಪ, ಕಂಠೀರವ ಸ್ಟುಡಿಯೋಸ್ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ಅರಸು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಶ್ರೀ ಥಾಮಸ್ ಡಿಸೋಜ಼್ ಅವರು ಉಪಸ್ಥಿತರಿರುವರು.

ವಿಚಾರ ಸಂಕಿರಣದ ಅಂಗವಾಗಿ ಮೂರು ಗೋಷ್ಠಿಗಳನ್ನು ಏರ್ಪಡಿಸಲಾಗಿದೆ. ಸಂಜೆ 4–00 ಗಂಟೆಗೆ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿದೆ.

ಬಾಬು:ಜಿಪಿಆರ್.

# ಪ್ರಾಥಮಿಕ ಶಿಕ್ಷಣದಲ್ಲಿ ದೇಶಿ ಭಾಷೆಗೆ ಆದ್ಯತೆ –

## ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)

ಪ್ರಾಥಮಿಕ ಶಿಕ್ಷಣದಲ್ಲಿ ದೇಶೀಯ ಭಾಷೆಗೆ ಆದ್ಯತೆ ದೊರೆಯಬೇಕು ಎಂದು ಮನವಿ ಮಾಡಲು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ್ ಕಂಬಾರ ಅವರ ನೇತೃತ್ವದ ನಿಯೋಗವು ಮಾತೃ ಭಾಷಾ ದಿನವಾದ ಫೆಬ್ರವರಿ 21 ರಂದು ದೆಹಲಿಗೆ ತೆರಳಿ ರಾಷ್ಟ್ರಪತಿ ಅವರನ್ನು ಭೇಟಿಯಾಗಲಿದ್ದಾರೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಇಂದು ಇಲ್ಲಿ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೆಂಗಳೂರು ವಿಭಾಗ ಮಟ್ಟದ ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಅವರು ಪ್ರಾಥಮಿಕ ಶಿಕ್ಷಣದಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ದೊರೆಯಬೇಕು ಎಂಬುದು ನಮ್ಮ ಸರ್ಕಾರದ ನಿಲುವಾಗಿದ್ದು, ಈ ಸಂಬಂಧ ನಾನು ಈಗಾಗಲೇ ಇತರ ರಾಜ್ಯಗಳ ಮುಖ್ಯಮಂತ್ರಿಗಳಿಗೂ ಈ ಬಗ್ಗೆ ಪತ್ರ ಬರೆದಿರುವುದಾಗಿ ತಿಳಿಸಿದರು.

ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೆ ಮಾತ್ರ ತಮ್ಮ ಮಕ್ಕಳಿಗೆ ಉಜ್ವಲ ಭವಿಷ್ಯ ಇದೆ ಎಂಬ ಭ್ರಮೆ ಬೇಡ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಹಾಗೆಯೇ ಭಾರತರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ಸಿ.ಎನ್. ರಾವ್ ಅವರು ವಿಶ್ವ ವಿಖ್ಯಾತಿ ಪಡೆದಿದ್ದಾರೆ ಎಂದ ಮುಖ್ಯಮಂತ್ರಿ ಅವರು ಗ್ರಾಮೀಣ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರು ಐ.ಎ.ಎಸ್., ಐ.ಪಿ.ಎಸ್., ವೈದ್ಯರು ಹಾಗೂ ಎಂಜಿನೀಯರುಗಳಾಗಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಆದ್ದರಿಂದ ಪೋಷಕರು ತಮ್ಮಲ್ಲಿರುವ ಆಂಗ್ಲ ಭಾಷಾ ವ್ಯಾಮೋಹವನ್ನು ತೊರೆಯಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಇನ್ನು ಹೆಚ್ಚಿಸಬೇಕು ಎಂದ ಮುಖ್ಯಮಂತ್ರಿಗಳು ಮಾತೃಭಾಷೆಯಲ್ಲಿ ಶಿಕ್ಷಣ ಪಡೆದಲ್ಲಿ ಜ್ಞಾನಾರ್ಜನೆ ಹೆಚ್ಚುತ್ತದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ ಇರಲಿ. ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಆಂಗ್ಲ ಭಾಷೆಯನ್ನು ಒಂದು ಭಾಷೆಯಾಗಿ ಕಲಿತರೆ ಯಾವ ಅಭ್ಯಂತರವಿಲ್ಲ ಎಂದು ಹೇಳಿದರು.

ದೇಶೀಯ ಭಾಷೆ ಉಳಿವಿಗಾಗಿ ನಾವೆಲ್ಲರೂ ಒಗ್ಗೂಡಬೇಕು ಎಂದು ಮಾತನಾಡಿದ ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರು ವಿಜ್ಞಾನದ ವಿಷಯಗಳನ್ನು ಓದಲು ಅನುಕೂಲವಾಗುವಂತೆ ವಿಜ್ಞಾನದ ಕೋಶವನ್ನು ಕನ್ನಡದಲ್ಲಿ ತರುವ ಪ್ರಯತ್ನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಲಿ ಎಂದರು..

ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಶ್ರೀ ಕಿಮ್ಮನೆ ರತ್ನಾಕರ್ ಹಾಗೂ ಇನ್ನಿತರ ಗಣ್ಯರು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಎಲ್. ಹನುಮಂತಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬಾಬು:ಕೆಪಿಪಿ:ಜಿಪಿಆರ್.

# Poultry Training Programme

**Bangalore, February 7, (Karnataka Information):**

**The State Poultry Breeding and Training Centre, Hesaraghatta, Bangalore 560 089 has organized 06 days Poultry Training Programme from 23-2-2015 to 28-2-2015. Interested persons may attend the Training programme. Further information contact Deputy Director National Co-ordinated Polultry Breeding Programme, State Poultry Farm, Hessarghatta, Bangalore -89 Ph 080-28466093.**

ಬಾಬು/ಕೆಎಂ

# ಕೋಳಿ ಸಾಕಾಣಿಕೆ ತರಬೇತಿ

ಬೆಂಗಳೂರು, ಫೆಬ್ರವರಿ 7(ಕರ್ನಾಟಕ ವಾರ್ತೆ):

ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ, ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ಫೆಬ್ರವರಿ 23 ರಿಂದ 29 ರವರೆಗೆ 06 ದಿನಗಳ ಕೋಳಿ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ಏರ್ಪಡಿಸಲಾಗಿದೆ. ಇಚ್ಛೆಯುಳ್ಳವರು ಸದರಿ ತರಬೇತಿಗೆ ಹಾಜರಾಗಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು 080- 28466093 ನ್ನು ಸಂಪರ್ಕಿಸಲು ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರಘಟ್ಟ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು/ಕೆಎಂ

# ಫಲಿತಾಂಶ

**ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಡಿಸೆಂಬರ್ –2014ರ ಮಾಹೆಯಲ್ಲಿ ನಡೆಸಿದ ಪ್ರಥಮ, ಮತ್ತು ದ್ವಿತೀಯ ಡಿ.ಇಡಿ ಪೂರಕ ಪರೀಕ್ಷೆಗಳ ಫಲಿತಾಂಶ ಪಟ್ಟಿಯನ್ನು ರಾಜ್ಯದ ಎಲ್ಲಾ ಡಯಟ್‌ಗಳಿಗೆ ಕಳುಹಿಸಲಾಗಿದೆ. ಸಂಬಂಧಿಸಿದ ಡಿ.ಇಡಿ. ಸಂಸ್ಥೆಗಳ ಪ್ರಾಂಶುಪಾಲರುಗಳು ಫಲಿತಾಂಶ ಪಟ್ಟಿಯನ್ನು ಆಯಾ ಡಯಟ್‌ಗಳಿಂದ ಪಡೆದು ದಿನಾಂಕ 10–2–2015 ರಂದು ಮಧ್ಯಾಹ್ನ 2–00 ಗಂಟೆಗೆ ಫಲಿತಾಂಶವನ್ನು ಆಯಾ ಸಂಸ್ಥೆಗಳಲ್ಲಿ ಪ್ರಕಟಿಸಲು ನಿರ್ದೇಶಕರು(ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರು ತಿಳಿಸಿದ್ದಾರೆ.

ಬಾಬು/ಕೆಎಂ

## Results

**Bangalore, February 7 (Karnataka Information)**

**Results of I & II year D.Ed Supplimentary Examination conducted by Karnataka Secondary Education Examination Board, Bangalore during December -2014, are sent to all the DIET's in the state. Concerned principals of D.Ed institutions are informed to collect the results from concerned DIET's and to announce the results on 10-2-2015 at 2.00 pm in the respective institutes as per the statement of Director(other Exams) KSEEB Bangalore.**

ಬಾಬು/ಕೆಎಂ

## ಶಾಲೆಯಲ್ಲಿ ಕಲಿತ ವಿಜ್ಞಾನ ಪಾಠಕ್ಕೆ ವಸ್ತುಸಂಗ್ರಹಾಲಯ ಪ್ರಾತ್ಯಕ್ಷಿಕ ವೇದಿಕೆ

**ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)**

ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿತ ವಿಜ್ಞಾನ ವಿಷಯದ ಪಾಠಕ್ಕೆ ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯವು ಪ್ರಯೋಗ ಹಾಗೂ ಪ್ರಾತ್ಯಕ್ಷಿಕೆಗೆ ವೇದಿಕೆಯಾಗಿದೆ ಎಂದು ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ ನಿರ್ದೇಶಕ ಶ್ಯಾಮ್ ಚೆಟ್ಟಿ ಅವರು ಅಭಿಪ್ರಾಯಪಟ್ಟರು.

ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯದ ಸುವರ್ಣ ಮಹೋತ್ಸವದ ಅಂಗವಾಗಿ ಸಂಗ್ರಹಾಲಯದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ 'ರೈಟ್ ಸಹೋದರರ ವಿಮಾನ ಅನುಕರಣೆ ವ್ಯವಸ್ಥೆ ವಿಜ್ಞಾನ ಪ್ರಾತ್ಯಕ್ಷಿಕ ಕೋಣೆ, ಹಾಗೂ ಪ್ರಕೃತಿ ವಿಕೋಪ ಕುರಿತು ಪ್ರದರ್ಶಿಸಲಾಗಿರುವ ಮಾನವ ನಿರ್ಮಿತ ಪ್ರಾತ್ಯಕ್ಷಿಕೆಗಳ ಕೊಠಡಿಯನ್ನು ಉದ್ಘಾಟಿಸಿದ ನಂತರ ಮಾತನಾಡಿದ ಅವರು ರೈಟ್ ಸಹೋದರರ ವಿಮಾನ ಅನುಕರಣೆ ವ್ಯವಸ್ಥೆಯನ್ನು ಮಾಡುವ ಮೂಲಕ ಹಿಂದಿನ ಕಾಲದಲ್ಲಿ ನಡೆಸಲಾದ ವೈಜ್ಞಾನಿಕ ಸಂಶೋದನೆಯನ್ನು ಇಂದಿನ ಮಕ್ಕಳಿಗೆ ಪರಿಚಯಿಸುವ ಜೊತೆಗೆ ರೈಟ್ ಸಹೋದರರು ಆವಿಷ್ಕರಿಸಿದ ವಿಮಾನದಲ್ಲಿ ಹಾರಾಡಿದ ಹಾಗೆ ಅನುಭವಿಸುವ ಅವಕಾಶವನ್ನು ಕಲ್ಪಿಸಿರುವುದು ನಿಜಕ್ಕೂ ಪ್ರಶಂಸನೀಯವಾದುದೆಂದರು.

ರೈಟ್ ಸಹೋದರರ ತಂದೆಯು ಕಾಗದದಿಂದ ಮಾಡಿದ ವಿಮಾನವನ್ನು ಹಾರಿಬಿಟ್ಟು, ಮಕ್ಕಳಿಗೆ ಇದು ಹೀಗೆಯೇ ಪಕ್ಷಿಯಂತೆ ಹಾರುಡುವಂತಿದ್ದರೆ ಎಷ್ಟು ಚನ್ನಾಗಿರುತಿತ್ತು ಎಂದರು. ಅದನ್ನೇ ಸ್ಫೂರ್ತಿಯಾಗಿ ಪಡೆದ ರೈಟ್ ಸಹೋದರರು ತಮ್ಮ ಕಠಿಣ ಪರಿಶ್ರಮದ ಮೂಲಕ ವಿಮಾನವನ್ನು ತಯಾರು ಮಾಡಿದರು. ಅದು 12 ನಿಮಿಷಗಳ ಕಾಲಾ ಹಾರಡಿತ್ತು, ಎಂದು ಇತಿಹಾಸವನ್ನು ನೆನಪಿಸಿಕೊಂಡ ಅವರು, ವೈಜ್ಞಾನಿಕ ತಂತ್ರಜ್ಞಾನ ಬೆಳೆದಿರುವ ಈ ಕಾಲದಲ್ಲಿ ಸಂಶೋಧನೆಗೆ ಬೇಕಾಗುವ ಎಲ್ಲಾ ಸೌಲಭ್ಯಗಳು ದೊರೆಯುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳು ವೈಜ್ಞಾನಿಕ ಪ್ರಾತ್ಯಕ್ಷಿಕೆಗಳ ಉಪಯೋಗವನ್ನು ಪಡೆದುಕೊಳ್ಳಬೇಕು. ಇಂದಿನ ದಿನಗಳಲ್ಲಿ

ಉಪಗ್ರಹಗಳ ಕುರಿತು ಆಸಕ್ತಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಆಕಾಶಕಾಯಕ್ಕೆ ಸಂಬಂಧಿಸಿದಂತೆ ಮತ್ತೊಂದು ವಸ್ತುಸಂಗ್ರಹಾಲಯವನ್ನು ಮಾಡಲು ಉದ್ದೇಶಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಪ್ರಾದೇಶಿಕ ಪಾಸ್ಪೋರ್ಟ್ ಅಧಿಕಾರಿ ಪಿ.ಎಸ್. ಕಾರ್ತಿಕೇಯನ್ ಅವರು ನನ್ನ ಕೆಲಸಕ್ಕೂ ವಿಜ್ಞಾನಕ್ಕೂ ಯಾವುದೇ ಸಂಬಂಧವಿಲ್ಲ. ಆದರೆ ವಿಜ್ಞಾನವು ಎಲ್ಲರಿಗೂ ಅವಶ್ಯಕವಾಗಿದೆ. ಇಂತಹ ವೈಜ್ಞಾನಿಕ ಪ್ರಾತ್ಯಕ್ಷಿಕೆಗಳಿಂದ ಅದರಲ್ಲೂ ಮಕ್ಕಳಿಗೆ ಜ್ಞಾನ, ಅನುಭವ, ಆಸಕ್ತಿ ಹೆಚ್ಚುತ್ತದೆ.ಮಾಧ್ಯಮದವರು ಮಕ್ಕಳ ಜ್ಞಾನ ಹೆಚ್ಚಿಸುವಂತಹ ಇಂತಹ ವಿಚಾರದ ಬಗ್ಗೆ ಪ್ರಚಾರವನ್ನು ಮಾಡಿದಲ್ಲಿ ಹೆಚ್ಚಿನ ಜನರಿಗೆ ಇದರ ಪ್ರಯೋನಜನ ದೊರೆಯಲಿದೆ ಎಂದು ತಿಳಿಸಿದರು.

ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯದ ನಿರ್ದೇಶಕರಾದ ಕೆ.ಜಿ. ಕುಮಾರ್ ಅವರು ಮಾತನಾಡಿ ದೇಶದಲ್ಲಿಯೇ ಅಲ್ಲದೇ ಏಷ್ಯಾ ಖಂಡದಲ್ಲೇ ಮೊದಲ ಬಾರಿಗೆ ಇಂತಹ ಪ್ರಾತ್ಯಕ್ಷಿಕೆಯನ್ನು ರಾಷ್ಟ್ರೀಯ ವೈಮಾನಿಕ ಪ್ರಯೋಗಲಾಯದ ಸಹಾಯದಲ್ಲಿ ಮಾಡಲಾಗಿದೆ. ರೈಟ್ ಸಹೋದರರು ತಯಾರಿಸಿದ ವಿಮಾನವು 12 ನಿಮಿಷ ಮಾತ್ರ ಹಾರಾಟ ಮಾಡಿತ್ತು. ಅವರ ಸಂಶೋಧನೆಯ ಫಲವಾಗಿ ಇಂದು ನಾವು ವಿಮಾನಗಳಲ್ಲಿ ನೂರಾರು ಜನರು ಒಟ್ಟಿಗೆ ಪಾನೀಯಗಳನ್ನು ಸೇವಿಸುತ್ತಾ ಗಂಟೆಗಟ್ಟಲೆ ಪ್ರಯಾಣಿಸುತ್ತಿದ್ದೇವೆ ಎಂದರು.

ರೈಟ್ ಸಹೋದರರ  ಅನುಕರಣೆಯ ವಿಮಾನ ಉದ್ಘಾಟಿಸಿದ ನಂತರ ಸ್ವತ: ಶ್ಯಾಮ್ ಚೆಟ್ಟಿ ಅವರು ಹಾರಾಟ ನಡೆಸಿ ರೈಟ್ ಸಹೋದರರ ವಿಮಾನ ಹಾರಾಟದ ಅನುಭವವನ್ನು ಪಡೆದರು. ನಗರದ ವಿವಿಧ ಶಾಲಾ ಕಾಲೇಜಿನಿಂದ ಆಗಮಿಸಿದ್ದ  ನೂರಾರು ಮಕ್ಕಳು ಈ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದರು.

ಬಾಬು/ಬಿಜಿಪಿ

# ಸರ್ ಸಿ.ವಿ. ರಾಮನ್ ಸ್ಮರಣೆಯಲ್ಲಿ ರಾಜ್ಯಮಟ್ಟದ ದೂರದರ್ಶನ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ –2015

**ಬೆಂಗಳೂರು, ಫೆಬ್ರವರಿ 7 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ರಾಜ್ಯದ ಜನತೆಯಲ್ಲಿ, ವಿಶೇಷವಾಗಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ  ಇಲಾಖೆ, ಕರ್ನಾಟಕ ವಿಜ್ಞಾನ  ಮತ್ತು ತಂತ್ರಜ್ಞಾನ ಪ್ರೋತ್ಸಾಹ ಸೊಸೈಟಿ, ಡಿ.ಎಸ್.ಇ.ಆರ್.ಟಿ. ಹಾಗೂ ದೂರದರ್ಶನ ಚಂದನ ವಾಹಿನಿ, ಬೆಂಗಳೂರು ಸಹಯೋಗದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಸರ್.ಸಿ.ವಿ. ರಾಮನ್ ರಾಜ್ಯಮಟ್ಟದ ದೂರದರ್ಶನ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ 2015 ಏರ್ಪಡಿಸಿತ್ತು.

ರಾಜ್ಯಾದ್ಯಂತ ಶೈಕ್ಷಣಿಕ ಜಿಲ್ಲೆಗಳೂ ಸೇರಿದಂತೆ ಎಲ್ಲ 34 ಜಿಲ್ಲೆಗಳಲ್ಲಿ "ಯುವ ವಿಜ್ಞಾನಿ" ಸ್ಪರ್ಧೆ ಪೂರ್ಣಗೊಂಡಿದ್ದು, ಪ್ರತಿ ಜಿಲ್ಲೆಯಲ್ಲಿಯೂ  ಈ ರಾಜ್ಯಮಟ್ಟದ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವು "ಥಟ್

ಅಂತ ಹೇಳಿ" ಕಾರ್ಯಕ್ರಮದ ನಿರೂಪಕರಾದ ಡಾ: ನಾ. ಸೋಮಶೇಖರ ರವರು ನುರಿತ ಅಧ್ಯಾಪಕರ ತಂಡದೊಂದಿಗೆ ನಡೆಸಿಕೊಡಲಿದ್ದಾರೆ. ಸಂಪೂರ್ಣ ಕಾರ್ಯಕ್ರಮವು ದಿನಾಂಕ 22 ಜನವರಿ 2015 ರಿಂದ 27 ಫೆಬ್ರವರಿ 2015 ರವರೆಗೆ ಒಟ್ಟು 27 ಕಂತುಗಳಲ್ಲಿ ಪ್ರತಿದಿನ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9–30 ರಿಂದ 10.00 ಗಂಟೆಯವರೆಗೆ ಪ್ರಸಾರವಾಗುತ್ತಿದೆ. 18 ಎಲಿಮಿನೇಷನ್ ಸುತ್ತುಗಳು, 6 ಕ್ವಾರ್ಟರ್‌ಫೈನಲ್, 2 ಸೆಮಿಫೈನಲ್ ಹಾಗೂ 1 ಫೈನಲ್ ಸುತ್ತುಗಳನ್ನು ಒಳಗೊಂಡಿರುತ್ತದೆ. ಪ್ರತಿ ಕಂತು ಕುರಿತು ಪ್ರಸಾರವಾದ ಮಾರನೆಯ ದಿನ ಬೆಳಿಗ್ಗೆ 11–00 ರಿಂದ 11–30 ರವರೆಗೆ ಕಾರ್ಯಕ್ರಮವು ಮರು ಪ್ರಸಾರವಾಗುತ್ತಿದೆ.

ಬಾಬು/ಬಿಜಿಪಿ/ಕೆಎಂ